ಮೈಸೂರು ೫ವೆಯ 2ನೇ.ಗ್ರೇಡ್ ಪ್ಲೀಡರ್‌ಗಳ ಪರೀಕ್ಷೆಯಲ್ಲಿ ಈ ಕೆಳಗೆ ನಮೂದಾಗಿರುವವರು ತೇರ್ಗಡೆಯಾಗಿರುತ್ತಾರೆ.

ಪರೀಕ್ಷೆಯಲ್ಲಿ ಕೊಡಲ್ಪಟ್ಟ ಸಂಖ್ಯೆ.	ಪರೀಕ್ಷೆಯಲ್ಲಿ ಪಡೆದ ಒಟ್ಟು ಸಂಖ್ಯೆ.	ಹೆಸರು.	ಕಸಬು ಮುಂತಾದ ವಿವರ.	ಯಾವ ಭಾಷೆಯಲ್ಲಿ ಪರೀಕ್ಷೆ ಕೊಟ್ಟದ್ದು.
1	30	ಬಿ. ವೆಂಕಪ್ಪ ..	ದಾವಣಗೆರೆ ಇಂಗ್ಲೀಷ್ ಸ್ಕೂಲ್ ಹೆಡ್‌ಮಾಸ್ಟರ್	ಇಂಗ್ಲೀಷ್
2	9	ಕೆ. ಸುಬ್ಬರಾವ್ ..	,,	ಸದರೀ

ಯಲ್. ಅನಂತಸ್ವಾಮಿರಾವ್,
ರೆಜಿಸ್ಟ್ರಾರ್.

ಫಿನ್ಯಾಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಛೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಸ್‌ಛೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿಸರ್, ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖೆ.

ತಾರೀಖು 8ನೇ ಆಗಸ್ಟ್ 1887.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ೫ವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬೂಬತು ಇದರಡಿಯಲ್ಲಿ ಚಕ್ಕುಬಿನೇಗಳು ಕೆಳಗೆ ಕಾಣಿಕೆ ಯಿರುವ ತಾರೀಖು ವ ಸ್ಥಳಗಳಲ್ಲಿ ಫಸ್ಟ್‌ಕ್ಲಾಸ್ ಅಸಿಸ್ಟೆಂಟ್ ಕಂನ್ಸರ್‌ವೇಟರ್ ಸಾಹೇಬರವರಿಂದ ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಡಿಯತಕ್ಕ ಸ್ಥಳದ ಹೆಸರು.	ಹರಾಜ್ ತಾರೀಖು.	ಕಾಡು ಜಾತೀನಾಟುಗಳು.	ಸಾಗವಾನಿ ಬೆಲಗಗಳು.	ಷರಾ.
ಆಯನೂರ ಡಿಪೊ ..	3ನೇ ಸೆಪ್ಟಂಬರ್ 1887	360	..	0
ತರೀಕೆರೇ ಡಿಪೊ ..	6ನೇ ಡಿಟೋ 1887	25	250	0
ಲಕ್ಕವಳ್ಳೀ ಡಿಪೊ ..	8ನೇ ಡಿಟೋ 1887	100	..	0
ಕಣಬೂರು ಡಿಪೊ ..	12ನೇ ಡಿಟೋ 1887	150	..	0

ಹರಾಜಿನ ಷರತ್ತುಗಳು—ಮೈಸೂರು ಗೆಜೆಟ್‌ನಲ್ಲಿ 1873ನೇ ಇಸವಿ ಜೂನ್ 12ನೇ ಮಕ್ಕುಂ ನಂಬರು 20ನೇ ಇಸ್ತಿಹಾರ್ ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಯಿರತಕ್ಕದ್ದು. ಮತ್ತು ಹರಾಜ್ ಕಾಲದಲ್ಲಿ ಘೋಷಿಸಲ್ಪಡುವದು.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 9ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ಕಾಣಿಸಿಯಿರುವ ಡಿಪೋಗಳಿಗೆ ಕಂಟ್ರಾಕ್ಟು ಮೂಲಕ ನಾಟೂ ವಗೈರೇ ಸಾಮಾನು ಜಮಾಯಿಸುವದಕ್ಕೆ ಈ ತಾರೀಖು ಲಾಗಾಯತು ಸೆಪ್ಟಂಬರ್ ತಾರೀಖು 30ರ ವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತ್ತವೆ.

1. ಈ ಕಂಟ್ರಾಕ್ಟು ಕಂಟ್ರಾಕ್ಟು ತಾರೀಖು ಲಾಗಾಯತು 1888ನೇ ಇಸವಿ ಮೇ ತಾರೀಖು 31ರ ವರಿಗೆ ಜಾರೀಯಲ್ಲಿ ಯಿರತಕ್ಕದ್ದು.

1.	ಶಿವಮೊಗ್ಗ ಡಿಪೊ ..	5.	ಜಸ್ಮಗಿರೀ ಡಿಪೊ ..
2.	ಆಯನೂರು ..	6.	ಲಕ್ಕವಳ್ಳಿ ..
3.	ಶಿಕಾರಿಪುರ ..	7.	ತರೀಕೆರೇ ..
4.	ಶಿರಾಳಕೊಪ್ಪ ..	8.	ಕಣಜೂರು ..

2. ಟೆಂಡರುಗಳು ಯಿಂಥಾ "ಡಿಪೋಗಳಿಗೆ ನಾಟೂ ವಗೈರೇ ಜಮಾಯಿಸತಕ್ಕ ಬಗ್ಯೆ ಟೆಂಡರ್" ಯಂದು ಲಿಫಾಪೆಗಳ ಮೇಲೆ ಬರದಿರತಕ್ಕದ್ದು.

3. ಪ್ರತಿ ವಂದು ಡಿಪೋಕ್ಕೆ ಯಿಷ್ಟು ನಾಟೂ ವಗೈರೇ ಜಮಾಯಿಸಬೇಕೆಂಬ ತಪಸೀಲ್, ಮತ್ತು ಯಾವ ಜಂಗ್ಲಿಯಿಂದ ನಾಟೂ ಕತರಾಯಿಸಬೇಕೆಂಬುವದು ಮತ್ತು ಈ ವಿಷಯದಲ್ಲಿ ತಿಳಿಯಬೇಕಾದ ಇತರ ಸಂಗತಿಗಳನ್ನು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕಂಸರ್‌ವೇಟರ್ ಸಾಹೇಬರವರ ಆಫೀಸಿನಲ್ಲಿ ನೋಟೀಸ್ ತಖ್ತೀಮೇಲೆ ನೋಡಿ ತಿಳಿದುಕೊಳ್ಳತಕ್ಕದ್ದು.

4. ಟೆಂಡರುಗಳ ಸಮೇತ ವಂದು ನೂರು ರೂಪಾಯಿಗಳನ್ನು ನಗದೀಯಾಗಲಿ ಕರೆನ್ಸೀ ನೋಟ್ ಮೂಲಕವಾಗಿಯಾಗಲಿ ಬೇವಣೀ ಹಾಜರ್ ಮಾಡಬೇಕು. ಬೇವಣೀ ವೊಬಲಗು ಯಿಲ್ಲದೇ ಬರುವ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದಿಲ್ಲವು.

5. ಪ್ರತಿ ದರಖಾಸ್ತುದಾರನು ನಾಟೂ ಯಾ ಜೆಲಗು ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕ ಬಿದರುಗಳ ಜಮಾಯಿಸುವದಕ್ಕೆ ಬೇಕಡಾ ವಂದಕ್ಕೆ ದರ ನಮೂದಿಸಬೇಕು.

6. ಯಾವ ಟೆಂಡರನ್ನಾಗಲೀ ಕಾರಣವನ್ನು ತೋರಿಸದೇ ತಿರಸ್ಕರಿಸಲಿಕ್ಕೆ ಫಾರೆಸ್ಟು ಅಸಿಸ್ಟೆಂಟ್ ಕಂಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿ ಯಿರುತ್ತಾರೆ.

7. ಜಂಗಲಿಯಲ್ಲಿ ಫಾರೆಸ್ಟು ಇಲಾಖೇಯವರು ನಿರ್ಣಾ ಮಾಡಿದ ಮರವನ್ನು ಕಡದು ಹಮ್ಮುಖವಕವಾಗಿ ಕೆತ್ತಿ ಡಿಪೋಕ್ಕೆ ಸಾಗಿಸುವದಕ್ಕೆ ದರಖಾಸ್ತುದಾರನು ಬದ್ಧನಾಗಿ ಯಿರತಕ್ಕದ್ದು.

8. ಕಂಟ್ರಾಕ್ಟು ಮಂಜೂರಾದ ತಾರೀಖು ಲಾಗಾಯತು ವಂದು ವಾರದವಳಗಾಗಿ ನ್ಯಾಯವಾದ ಸ್ಟ್ಯಾಂಪು ಕಾಗದದಮೇಲೆ ಕಂಟ್ರಾಕ್ಟು ಮುಚ್ಚಳಿಕೆ ಬರಕೊಡದೇ ತಪ್ಪಿದ ಪಕ್ಷದಲ್ಲಿ ಬೇವಣೀ ವೊಬಲಗು ಸರಕಾರಕ್ಕೆ ಜೇರಿಸಿಕೊಳ್ಳಲ್ಪಡುತ್ತದೆ.

9. ಕಂಟ್ರಾಕ್ಟು ಮುಚ್ಚಳಿಕೆ ನಮೂನೆ ವ ಷರತ್ತುಗಳು ಮತ್ತು ಕಂಟ್ರಾಕ್ಟುದಾರಿಗೆ ಬೇಕಾದ ಇತರ ವಿಷಯಗಳನ್ನು ಫಾರೆಸ್ಟು ಅಸಿಸ್ಟೆಂಟ್ ಕಂಸರ್‌ವೇರ್ ಸಾಹೇಬರವರ ಆಫೀಸಿನಲ್ಲಿ ಹಾಜರಾಗಿ ತಿಳಿದುಕೊಳ್ಳತಕ್ಕದ್ದು.

ಯಲ್. ರಿಕ್ಕೆಟ್ಸ್,
ಕಂಸರ್‌ವೇಟರ್ ಜನರಲ್ ಆಫ್ ಫಾರೆಸ್ಟ್ಸ್.